ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದಂ

ಅಧ್ಯಕ್ಷರು.—''ಖಂಡ ೨ರಿಂದ ೪ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ೨ರಿಂದ ೪ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವವನ್ನು ಅಂಗೀಕರಿಸಲಾಯಿತಂ

ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೮ನೇ ಇಸವಿಯ ಕರ್ನಾಟಕ ಕುಷ್ಠರೋಗ ಶಾಸನಗಳ (ನಿರಸನ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೮ನೇ ಇಸವಿಯ ಕರ್ನಾಟಕ ಕುಷ್ಠರೋಗ ಶಾಸನಗಳ (ನಿರಸನ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತಂ ಮತ್ತು ವಂಸೂದೆಗೆ ಒಪ್ಪಿಗೆ ನೀಡಲಾಯಿತು

೧೯೮೮ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಂಗಳ (ತಿದ್ದುಪಡಿ) ವಿಧೇಯಂಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಮಾನ್ಯ ವಿದ್ಯಾಮಂತ್ರಿಗಳು ಬಂದರೆ ಒಳ್ಳೆಯದು. ಏಕೆಂದರೆ ಅಷ್ಟು ಸುಲಭವಾಗಿ ಇದನ್ನು ಪಾಸ್ ಮಾಡುವುದಕ್ಕೆ ಬರುವುದಿಲ್ಲ. ಇದರಲ್ಲಿ ಸಾಕಷ್ಟು ಅಕಾಡೆಮಿಕ್ ಪ್ಯಾಟರ್ಸ್ ಇನ್ವಾಲ್ವ್ ಆಗಿದೆ.

ಅಧ್ಯಕ್ಷರು.—ಮೊದಲು ಮಂತ್ರಿಗಳು ಮಂಡಿಸಲಿ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ).—ಮಾನ್ಯ ಅಧ್ಯಕ್ಷರೇ ಶ್ರೀ ಎಂ. ಚಂದ್ರಶೇಖರ್ (ವಿದ್ಯಾಮಂತ್ರಿ) ಅವರ ಪರವಾಗಿ ೧೯೮೮ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಂಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತಂ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಸರಳವಾದಂಥ ತಿದ್ದುಪಡಿಯನ್ನು ತರಲಾಗಿದೆ. ಈಗ ಇರತಕ್ಕಂಥ ಕಾನೂನಿನಲ್ಲಿ ಏನಿದೆ, ಅದನ್ನು ಎಕ್ಸ್‌ಟ್ರಾಕ್ಟ್ ಪೇಜ್ ೬ರಲ್ಲಿ ಕೊಡಲಾಗಿದೆ.

"(17) Deans.- (1) Every Chairman of the Departmental Council of a Department of Studies, who is a Professor, Shall, by rotation according to seniority, act as the Dean of the Faculty for a period of two years. Where no Chairman is a Professor, a Professor shall, by rotation according to Seniority, act as the Dean of the Faculty for a period of two years"

(21) The Senate.—(1) The Senate shall consist of the following members, namely.-

(19) One Professor or Director in the Post-Graduate Departments from each of the faculties, elected by Professors and Directors in Post-Graduate Departments of that faculty"

3-30 p.m.

SRI A. LAKSHMISAGAR.—The Statement of Objects and rsason of this bill is,

"It is considered necessary to amend Sections 17 and 21 of the Karnataka State Universities Act 1976, to overcome the difficulties in the matter of Appointment of Deans of Faculties, where there is no Professor in a Faculty or where University does not have a Department of Studies for any faculty or where no person in any Department of Studies is available to act as the Dean"

This is the main purpose of the amendment where there is no provision. We have now provided a proviso to overcome the difficulties in the matter of Appointment of Deans of Faculties.

Section 17 says,

In sub-section (1) of section 17 of the Karnataka State Universities Act, 1976 (Karnataka Act 28 of 1976) (hereinafter referred to as the principal Act), at the end, the following provisos shall be inserted, namely.-

"Provided that if in any Faculty there is no Professor, the Senior-most Reader shall act as the Dean and if there is no Reader, such teacher as the Vice-chancellor may designate shall act as the Dean"

This is very simple. It provides for administrative facility, administrative convenience and when this department will not be having

a Departmental Head to look after the administrative work, it is only to facilitate easy functioning of the department such provision is necessary. It is only a enabling provision, it does not confer extraordinary or special rights on anybody and my submission therefore is it may kindly be approved.

ಶ್ರೀ ಎಂ. ವಂಲ್ಲಿಕಾರ್ಜುನ ಖಿರ್ಗೆ.—ಅಧ್ಯಕ್ಷರೇ, ಇದನ್ನು ನಾಳೆ ತೆಗೆದುಕೊಂಡರೆ ಒಳ್ಳೆಯದು, ಏಕೆಂದರೆ, ಇದು ಅಕಾಡೆಮಿಕ್ ವಿಷಯ ಇದೆ, ಆಮೇಲೆ ಅಪಾಯಿಂಟ್‌ಮೆಂಟ್ಸ್ ಮೆಯಿನ್‌ಟೆನೆನ್ಸ್ ಆಫ್ ರೋಸ್ಟರ್ ಸಿಸ್ಟಂ, ಆಮೇಲೆ ಸಿಂಡಿಕೇಟ್, ಸೆನೆಟ್ ಸದಸ್ಯರು ಹೊಸದಾಗಿ ನಾಮಿನೇಟ್ ಮಾಡುವುದರ ಬಗ್ಗೆ ಇವೆಲ್ಲವನ್ನೂ ಸವಿಸ್ತಾರವಾಗಿ ಹೇಳಬೇಕಾಗುತ್ತದೆ. ಅದಕ್ಕಾಗಿ ಇದನ್ನು ನಾಳೆ ತೆಗೆದುಕೊಂಡರೆ ಒಳ್ಳೆಯದು, ಜೊತೆಗೆ ನಾಳೆ ಶಿಕ್ಷಣ ಸಚಿವರೂ ಇರುತ್ತಾರೆ. ಆದ್ದರಿಂದ ಇದನ್ನು ದಯವಿಟ್ಟು ನಾಳೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

SRI M. VEERAPPA MOILY.—The Hon'ble Law Minister he has not been briefed...

SRI A. LAKSHMISAGAR.—I have completely been briefed. There need not be any doubt about it. either on the technicalities of the matter of administrative...

SRI K. H. PATIL.—There are certain Advocates who are not briefed by their clients and they also don't expect briefing.

SRI A. LAKSHMISAGAR.—There cannot be any lawyer without being briefed.

ಶ್ರೀ ಎಂ. ವೀರಪ್ಪ ಮೊಯಿಲಿ —ನಾಳೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ಎ. ಲಕ್ಷ್ಮೀಸಾಗರ್,—ಅವರು ತಮ್ಮ ಅಭಿಪ್ರಾಯಗಳನ್ನು ಹೇಳಲಿ.

ಶ್ರೀ ಕೆ. ಹೆಚ್. ಪಾಟೀಲ್.—ಇದರ ಬಗ್ಗೆ ಬ್ರೀಫ್ ಆಗಿ ಹೇಳಬೇಕಾದರೆ ಕನ್‌ಸರ್ನ್ಡ್ ಮಿನಿಸ್ಟರ್ ಬೇಕು ಫೈಲ್ ಬೇಕು. ಯಾವ ಉದ್ದೇಶದಿಂದ ಈ ಆಕ್ಟ್ ತಂದಿದ್ದಾರೆ, ಹಿಂದೆ ಏನಿತ್ತು, ಯಾವ ನ್ಯೂನತೆಯನ್ನು ಇದರೊಳಗೆ ಕಂಡುಹಿಡಿದರು, ಇದೆಲ್ಲಾ ಹೇಳಬೇಕು. ಹೀಗೆ ಸುಮ್ಮನೆ ಆಕ್ಟ್ ತಂದಿದ್ದೀವಿ, ಸ್ಟೇಟ್‌ಮೆಂಟ್ ಆಫ್ ರೀಸನ್ಸ್‌ನಲ್ಲಿ ಎಲ್ಲಾ ಇದೆ ಪಾಸ್ ಮಾಡಿರಿ ಎಂದರೆ ಆಗಂವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್,—ಈ ತಿದ್ದುಪಡಿಯ ಮೂಲ ಉದ್ದೇಶವನ್ನು ನಾನು ವಿವರಣೆ ಮಾಡಿ, ಇದನ್ನು ಮಾನ್ಯ ಸದಸ್ಯರ ಮುಂದೆ ಇಟ್ಟಿದ್ದೇನೆ. ನಾಳೆ ಬೇಕಾದರೆ ಇದನ್ನು ಪಾಸ್ ಮಾಡಿ ಕೊಣ. ಅದಕ್ಕೆ ನಾನೂ ಏನೂ ಹೇಳುವುದಿಲ್ಲ. ಇವತ್ತು ತಮ್ಮ ಅಭಿಪ್ರಾಯ ಇಟ್ಟರೆ ಅದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಮ್ಮ ವಿಚಾರವನ್ನು ಮೆಲುಕು ಹಾಕಿ ಚೆನ್ನಾಗಿ ತಿಳಿದುಕೊಂಡು ತಿಳಿಸಿ, ಪರಿಪೂರ್ಣವಾದಂಥ ತಮಗೆ ಮನಸ್ಸಿಗೆ ಒಪ್ಪಿಗೆಯಾಗುವಂತಹ ರೀತಿಯಲ್ಲಿ ಉತ್ತರ ಕೊಡುವುದಕ್ಕೆ ಹೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಏನಾದರೂ ಹೇಳುವುದಕ್ಕೆ ವಾದಿಗಳೇ ಇಲ್ಲ, ಪ್ರತಿವಾದಿಗಳು ಏನು ಮಾಡಬೇಕು. ಮೊದಲು ನಿಮ್ಮವನ್ನ ಕೇಳಿದ ಮೇಲೆ ನಾವು ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ವಾದವೂ ಇಲ್ಲ, ಪ್ರತಿವಾದವೂ ಇಲ್ಲ, ಇದು ಕಾನೂನು ಮಾಡತಕ್ಕ ವಿಚಾರ. ತಮ್ಮ ಅಭಿಪ್ರಾಯ ಹೇಳಿರಿ. ನಾನು ಬೇಡ ಎನ್ನುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಿನಿಸ್ಟರ್ ಬರಲಿ.

ಉಪಾಧ್ಯಕ್ಷರು.—ತಾವು ಪ್ರಾರಂಭ ಮಾಡಿ

ಶ್ರೀ ಕೆ. ಹೆಚ್ ಪಾಟೀಲ್.—ಮಿನಿಸ್ಟರ್‌ರವರು ಪ್ರಿಲಿಮಿನರಿಯಾಗಿ ಮಾತನಾಡಿದ ನಂತರ ನಮಗೆ ಏನಾದರೂ ಹೇಳುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಏನು ಹೇಳಬೇಕು.

ಉಪಾಧ್ಯಕ್ಷರು.—ಈಗಾಗಲೇ ಸಚಿವರು ಹೇಳಿದ್ದಾರೆ. ತಮ್ಮ ಅಭಿಪ್ರಾಯ ಹೇಳಿದರೆ ಅದನ್ನು ತೆಗೆದುಕೊಂಡು ಸಂಬಂಧಪಟ್ಟ ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಇದು ಏನಾದರೂ ಸಂಬಂಧಪಟ್ಟ ಮಂತ್ರಿಗಳ ಮುಂದೆ ಆಗಬೇಕಂ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಉಪಾಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ಏನಾದರೂ ತಮಗೆ ಬರೆದು ಕಳುಹಿಸಿದ್ದಾರೆಯೇ ? ನನಗೆ ಅನಾನುಕೂಲ ಇದೆ, ಕಾನೂನು ಮಂತ್ರಿಗಳು ಇದನ್ನು ಮಾಡುತ್ತಾರೆ ಎಂದು ಬರೆದು ಕಳುಹಿಸಿದ್ದಾರೆಯೇ ?

ಉಪಾಧ್ಯಕ್ಷರು.—ಅದೇನೂ ಇಲ್ಲ, ತಮಗೆ ಗೊತ್ತಿದೆ, ಕಾನೂನು ಮಂತ್ರಿಗಳು ಇದನ್ನು ಮಾಡಬಹುದು.

SRI M. VEERAPPA MOILY.—We would like to know whether there is any letter from the Hon'ble Minister for Education Moreover this bill is standing in the name of the Education Minister.

ಉಪಾಧ್ಯಕ್ಷರು.—ತಮಗೆ ಗೊತ್ತಿದೆ, ತಮಗೆ ಹೇಳುವುದೇನೂ ಬೇಕಾಗಿಲ್ಲ, ಕಾನೂನು ಸಚಿವರಿಗೆ ಅರ್ಹತೆ ಇದೆ. ವೇಲಾಗಿ ಮಾನ್ಯ ಶಿಕ್ಷಣ ಸಚಿವರು ಇನ್ನೊಂದು ಮನೆಯಲ್ಲಿ ಇದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಉಪಾಧ್ಯಕ್ಷರೇ, ತಮ್ಮ ಅನುಮತಿ ಇಲ್ಲದೆ ಒಬ್ಬ ಸಚಿವರು ಮತ್ತೊಬ್ಬ ಸಚಿವರು ಅಥರೈಸೇಷನ್ ಮಾಡದೇ ಇದ್ದರೂ ಕೂಡಾ ಓಂದು ಬಿಲ್ಲನ್ನು ಇಲ್ಲ ಪ್ರಸ್ತಾಪಿಸತಕ್ಕಂಥ ಹಕ್ಕು ಯಾವುದೇ ಮಿನಿಸ್ಟರ್‌ಗೆ ಇದೆ ಎಂದು ರೂಲಿಂಗ್ ಕೊಡಿರಿ. In that case any Minister can ask anybody to move the bill and answer it. Do you have the letter from the Minister. state that the Hon'ble Law Minister can do that job...

ಶ್ರೀ ಬಿ. ಎಂ. ಇದಿನಬ್ಬ.—ವಿದ್ಯಾಮಂತ್ರಿಗಳು ಇಲ್ಲದೆ, ಯಾರ ಸಮ್ಮುಖದಲ್ಲಿ ಇದನ್ನು ಚರ್ಚೆ ಮಾಡುವುದು.

ಉಪಾಧ್ಯಕ್ಷರು.—ಶಿಕ್ಷಣ ಸಚಿವರು ಮೇಲ್ಮನೆಯಲ್ಲಿ ಇರುವುದರಿಂದ ಅವರ ಪರವಾಗಿ ಕಾನೂನು ಸಚಿವರು ಮಾಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ತಮ್ಮ ಪರವಾಗಿ ಕಾನೂನು ಸಚಿವರು ಇದನ್ನು ಮಾಡುತ್ತಾರೆ ಎಂದು ತಮಗೆ ಏನಾದರೂ ಬರೆದಿದ್ದಾರೆಯೇ? ಈ ಬಿಲ್ಲನ್ನು ನನ್ನ ಪರವಾಗಿ ಮಾನ್ಯ ಕಾನೂನು ಸಚಿವರು ಮೂವ್ ಮಾಡುತ್ತಾರೆ. ಪ್ರಸ್ತಾಪ ಮಾಡುತ್ತಾರೆ ಎಂದು ತಮಗೆ ಏನಾದರೂ ಬರೆದಿದ್ದಾರೆಯೇ ? ಆ ರೀತಿ ಬರೆದಿದ್ದರೆ ನಾವು ಒಪ್ಪುತ್ತೇವೆ. ಆ ರೀತಿ ಬರೆಯದಿದ್ದರೂ ಸಹ ಸ್ಪೀಕರ್‌ಗೆ ಅಧಿಕಾರ ಇದೆ, ಯಾರಾದರೂ ಏನಾದರೂ ಮಾಡಬಹುದು ಎಂದು ತಾವು ಅಧ್ಯಕ್ಷ ಸ್ಥಾನದಲ್ಲಿ ಕುಳಿತು ಕೊಂಡು ಹುಕುಮ್ ಕೊಡುವಂತಹ ಆದೇಶ ಕೊಡುವಂತಹ ಹಕ್ಕು ತಮಗೆ ಇದ್ದರೆ ಅದನ್ನು ಉಚ್ಚಾರ ಮಾಡಿಬಿಡಿ, ನಾವು ಒಪ್ಪುತ್ತೇವೆ.

MR. DEPUTY SPEAKER.—He is a Law Minister, He can do that...

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರು ಮೇಲ್ಮನೆಯಲ್ಲಿ ದ್ದಾರೆ. ನನಗೆ ಹೇಳಿ ಕಳುಹಿಸಿದ್ದಾರೆ. ಅಲ್ಲಿ ಕಾರ್ಯಕಲಾಪಗಳು ನಡೆಯುತ್ತಿವೆ. ಅವರು ಅಲ್ಲಿ ದ್ದಾರೆ. ಈಗ ಈ ಬಿಲ್ ಮಂಡನೆಯಾಗಿದೆ. ತಾವು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿರಿ. ಅವರು ಉತ್ತರ ಕೊಡುತ್ತಾರೆ. ನಾನು ಅವರ ಕೈಯಲ್ಲೇ ಉತ್ತರ ಕೊಡಿಸುತ್ತೇನೆ. ನಾನು ಉತ್ತರ ಕೊಡುವುದಿಲ್ಲ. ನೀವು ಅಡಳಿತಾತ್ಮಕವಾಗಿಯಾಗಲೀ ಅಥವಾ ತಿದ್ದುಪಡಿ ಸರಿಯಾಗಿಲ್ಲ ಎಂಬ ವಿಚಾರ ದಲ್ಲಾಗಲೀ ಅಥವಾ ಇದರಲ್ಲಿರತಕ್ಕಂಥ ದೋಷಗಳು ಲೋಪಗಳು, ವಿಪರ್ಯಾಸಗಳು ಏನೇ ಇರಲಿ ಅದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೇಳಿರಿ. ನಾನು ಎಲ್ಲವನ್ನೂ ಬರೆದುಕೊಂಡು ನಾನು ಅವರ ಕೈಯಲ್ಲೇ ಉತ್ತರ ಕೊಡಿಸುತ್ತೇನೆ. ಅವರು ಹೇಳಿಕಳುಹಿಸಿದ್ದಾರೆ, ಬರುತ್ತಾರೆ.

ಶ್ರೀ ಯು. ಭೂಪತಿ.—ಈ ಬಿಲ್ ಎಜುಕೇಷನ್ ಮಿನಿಸ್ಟರ್ ಚಂದ್ರಶೇಖರ್ ಅವರ ಹೆಸರಿನಲ್ಲಿ ಇಲ್ಲ, ಜೀವರಾಜ್ ಆಳ್ವ ಅವರ ಹೆಸರಿನಲ್ಲಿ ಇದೆ. ಪ್ರಿಂಟ್ ಮಾಡುವಾಗಲಾದರೂ ಈಗಿನ ಶಿಕ್ಷಣ ಸಚಿವರ ಹೆಸರಿನಲ್ಲಿ ಪ್ರಿಂಟ್ ಮಾಡಬೇಕಾಗಿತ್ತು.

SRI K. H. PATIL.—Even then the bill has not been introduced by the Hon'ble Minister for Education...

SRI A. LAKSHMISAGAR.—It was already introduced during the last Session itself. It is now at the consideration stage.

SRI K. H. PATIL.—Then, at the consideration stage the Minister incharge of the Bill should may for consideration of the House. After that only bill will be taken up for consideration.

SRI A. LAKSHMISAGAR.—Consideration motion has been moved. We are now at the discussion stage, I request the hon'ble Members to participate in the discussion.

SRI K. H. PATIL.—Why are you so urgent. We have given full co-operation. Four bills have been passed.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಚರ್ಚೆ ಶುರು ಮಾಡಿ ಎಂದು ಹೇಳಿದ್ದುದು ತಪ್ಪೇ ?

ಶ್ರೀ ಕೆ. ಹೆಚ್. ಪಾಟೀಲ್,—ಇನ್ನುಳಿದ ಸಂಬಂಧಪಟ್ಟ ಮಂತ್ರಿಗಳು ಇಲ್ಲ

ಶ್ರೀ ಎ. ಲಕ್ಷ್ಮೀಸಾಗರ್.—ಆಯಿತು ಅಧ್ಯಕ್ಷರೇ ಅರ್ಧಗಂಟೆ ಮುಂದಕ್ಕೆ ಹಾಕಿ.

ಉಪಾಧ್ಯಕ್ಷರು.—ಸಭೆಯನ್ನು ಅರ್ಧಗಂಟೆ ಕಾಲ ಮುಂದಕ್ಕೆ ಹಾಕಿದ್ದೇನೆ.

(ಸಭೆಯು ಪ-೪೨ರಿಂದ ಅರ್ಧ ಗಂಟೆ ಮುಂದೂಡಲಾಯಿತು.)

ಸದನವು ಪ-೨೭ಕ್ಕೆ ಪುನಃ ಸಮಾವೇಶಗೊಂಡಿತು.

ಅಧ್ಯಕ್ಷರು —ಇದು ಶಿಕ್ಷಣ ಮಂತ್ರಿಗಳಿಗೆ ಸಂಬಂಧಪಟ್ಟ ಮಸೂದೆ ಇರುವುದರಿಂದ ಅವರು ಮೇಲ್ಮನೆಯಲ್ಲಿರುವುದರಿಂದ, ಇಂದು ಮಸೂದೆಯನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಸಭೆಯನ್ನು ನಾಳೆಗೆ ಮುಂದೂಡುತ್ತೇನೆ.

ಸಭೆಯು ಪ-೨೮ಕ್ಕೆ ಮುಕ್ತಾಯವಾಯಿತು

(ಸದನವು ಪ-೨೮ಕ್ಕೆ ಮುಕ್ತಾಯವಾಗಿ ಮರುದಿನ ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಿತು.)